# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಜಂಆ(ಕಂ)ಪಿ.ಆರ್/274/2024-25

ಮುಖ್ಯ ಆಯುಕ್ತರವರ ಕಛೇರಿ,
ನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ : 14.10.24

## ಸುತ್ತೋಲೆ

ವಿಷಯ : ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಮಿ ಮತ್ತು ಕಟ್ಟಡಗಳ ಮೇಲೆ ಅಳವಡಿಸಲಾಗಿರುವ ದೂರ ಸಂಪರ್ಕ ಗೋಪುರಗಳಿಗೆ ಆಸ್ತಿ ತೆರಿಗೆಯನ್ನು ವಿಧಿಸಿ, ಸಂಗ್ರಹಿಸುವ ಬಗ್ಗೆ.

ಉಲ್ಲೇಖ :
1. ಬಿಬಿಎಂಪಿ ಆಸ್ತಿತೆರಿಗೆ ನಿಯಮಗಳು 2009 ದಿನಾಂಕ: 13-01-2009.
2. ದಾವೆ ಸಂಖ್ಯೆ: WP No 8114 of 2009 C/w WP No 13009/ 2009 ರಲ್ಲಿನ ದಿನಾಂಕ: 01-02-2023 ರ ಆದೇಶ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆ.ಎಂ.ಸಿ ಕಾಯ್ದೆ 1976 ಕಲಂ 108ಎ ಹಾಗೂ ಅದರಡಿಯಲ್ಲಿ ರಚಿಸಲಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿತೆರಿಗೆ ನಿಯಮಾವಳಿಗಳು 2009 ರ ಅನ್ವಯ ಪಾಲಿಕೆ ವ್ಯಾಪ್ತಿಯಲ್ಲಿ ಭೂಮಿ ಮತ್ತು ಕಟ್ಟಡಗಳ ಮೇಲೆ ಸ್ಥಾಪಿಸಲಾದ ದೂರಸಂಪರ್ಕ ಗೋಪುರಗಳ ಮೇಲೆ ಆಸ್ತಿ ತೆರಿಗೆ ವಿಧಿಸಲು ಮತ್ತು ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿರುವಂತೆ, ದೂರಸಂಪರ್ಕ ಗೋಪುರಗಳನ್ನು ಹೊಂದಿರುವಂತಹ ಸ್ವತ್ತಿನ ತೆರಿಗೆದಾರರು ದೂರಸಂಪರ್ಕ ಗೋಪುರಗಳನ್ನು ಘೋಷಿಸಿಕೊಂಡು ಆಸ್ತಿತೆರಿಗೆಯನ್ನು ಪಾವತಿಸುತ್ತಿದ್ದರು.

ತದನಂತರ, ಟೆಲಿಕಾಂ ಆಪರೇಟರ್‌ಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಉಲ್ಲೇಖ-(2) ರಂತೆ ದಾವೆಯನ್ನು ಹೂಡಿ, ಕಾಯ್ದೆಯಲ್ಲಿ ಕಟ್ಟಡದ ವ್ಯಾಖ್ಯಾನದ ಅಡಿಯಲ್ಲಿ ದೂರಸಂಪರ್ಕ ಗೋಪುರಗಳ ಬಗ್ಗೆ ವ್ಯಾಖ್ಯಾನಿಸದೇ ಇರುವುರಿಂದ, ದೂರಸಂಪರ್ಕ ಗೋಪುರಗಳ ಮೇಲೆ ಆಸ್ತಿ ತೆರಿಗೆ ವಿಧಿಸಿ ಮತ್ತು ಸಂಗ್ರಹಿಸಲು ಪಾಲಿಕೆಗೆ ಅವಕಾಶವಿರುವುದಿಲ್ಲ ಎಂದು ತಿಳಿಸುತ್ತಾ, ದೂರಸಂಪರ್ಕ ಗೋಪುರಗಳಿಗೆ ಆಸ್ತಿ ತೆರಿಗೆ ಪಾವತಿಯಿಂದ ವಿನಾಯಿತಿ ನೀಡುವಂತೆ ಮನವಿ ಮಾಡಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಉಲ್ಲೇಖ-(2) ರ ದಾವೆಯನ್ನು ಕುಲಂಕುಶವಾಗಿ ಪರಿಶೀಲಿಸಿ, ಮಾನ್ಯ ಉಚ್ಚ ನ್ಯಾಯಾಲಯದ ಮೇಲ್ಕನವಿ ದಾವೆಗಳಾದ WA ಸಂಖ್ಯೆ 1/2011 ಮತ್ತು 551-552/2011c/w WA No 1009/2011 ರಲ್ಲಿ ನೀಡಲಾದ ನಿರ್ದೇಶನಗಳ ಅಧಾರ, ಕರ್ನಾಟಕ ಸರ್ಕಾರವು ಕೆ.ಎಂ.ಸಿ ಕಾಯ್ದೆ 1976 ಪ್ರಕರಣ 2 ಖಂಡ 1ಎ ಉಪ-ಖಂಡ (ಎ) ರಲ್ಲಿ ಕಟ್ಟಡದ ವ್ಯಾಖ್ಯಾನಕ್ಕೆ ತಿದ್ದುಪಡಿ ತಂದು "ದೂರಸಂಪರ್ಕ ಗೋಪುರಗಳು ಅಥವಾ ಜಾಹೀರಾತು ನಿರ್ಮಾಣ ಸೇರಿದಂತೆ ಯಾವುದೇ ಇತರೆ ನಿರ್ಮಾಣ ಗಳು, ಯಾವುದೇ ಹೆಸರನ್ನು ಕರೆಯಲಿ" ಎಂದು ಸೇರ್ಪಡಿಸಿ. ದಿನಾಂಕ: 09-01-2015 ರಂದು ಅಧಿಸೂಚನೆಯನ್ನು ಹೊರಡಿಸಿರುವಂತೆ, ದಿನಾಂಕ: 09-01-2015 ರಿಂದ ದೂರಸಂಪರ್ಕ ಗೋಪುರಗಳ ಮೇಲೆ ಆಸ್ತಿ ತೆರಿಗೆಯನ್ನು ವಿಧಿಸಿ ಮತ್ತು ಸಂಗ್ರಹಿಸಬಹುದೆಂದು ತೀರ್ಪು ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲೆ ತಿಳಿಸಲಾದ ಅಧಿಸೂಚನೆ ಹಾಗೂ ನ್ಯಾಯಾಲಯದ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು, ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಮಿ ಮತ್ತು ಕಟ್ಟಡಗಳ ಮೇಲೆ ಸ್ಥಾಪಿಸಲಾದ ದೂರಸಂಪರ್ಕ ಗೋಪುರಗಳ ಮೇಲೆ ಆಸ್ತಿ ತೆರಿಗೆಯನ್ನು 2014-2015 ನೇ ಸಾಲಿನ ಎರಡನೇ ಅರ್ಧ ವಾರ್ಷಿಕದಿಂದ ಅಂದರೆ ದಿನಾಂಕ : 01-10-2014 ರಿಂದ ಬಿಬಿಎಂಪಿ ಕಾಯ್ದೆ ಮತ್ತು ನಿಯಮಗಳನ್ವಯ ಪ್ರತಿ ದೂರಸಂಪರ್ಕ ಗೋಪುರಗಳಿಗೆ ನಿಗದಿಪಡಿಸಿರುವ ಆಸ್ತಿತೆರಿಗೆ, ಉಪಕರ, ಬಡ್ಡಿ ಮತ್ತು ದಂಡದ (ಪ್ರತಿ ಗೋಪುರಕ್ಕೆ ನಿಗದಿಪಡಿಸಿರುವ ವಾರ್ಷಿಕ ದರದ ಶೇ 100% ರಷ್ಟು) ಸಮೇತ ಬಾಕಿ ಆಸ್ತಿತೆರಿಗೆಯನ್ನು ವಿಧಿಸಿ ಸಂಗ್ರಹಿಸಬೇಕಾಗಿರುತ್ತದೆ.

ಆದರೆ, ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಆಸ್ತಿ ತೆರಿಗೆ ಪಾವತಿಸುವ ಸಂಬಂಧ ಒಂದು ಬಾರಿ ಪರಿಹಾರ ಯೋಜನೆಯನ್ನು ಜಾರಿ ಮಾಡಿದ್ದು, ಸದರಿ ಯೋಜನೆಯಲ್ಲಿ ಪ್ರತಿ ದೂರಸಂಪರ್ಕ ಗೋಪುರಗಳಿಗೆ ನಿಗದಿಪಡಿಸಿರುವ ಆಸ್ತಿತೆರಿಗೆ ಮತ್ತು ಉಪಕರಕ್ಕೆ ಪಾವತಿಸಬೇಕಾದ ಬಡ್ಡಿ ಮೊತ್ತವನ್ನು ಮತ್ತು ಆಸ್ತಿ ತೆರಿಗೆ ಪರಿಷ್ಕರಣೆ ಪ್ರಕರಣಗಳಿಗೆ ವಿಧಿಸುವ ದಂಡದ ಮೊತ್ತವನ್ನು ಮನ್ನಾ ಮಾಡಿದ್ದು, ಸದರಿ ಒಂದು ಬಾರಿ ಪರಿಹಾರ ಯೋಜನೆಯು ದಿನಾಂಕ:30-11-2024ರ ವರೆಗೆ ಜಾರಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸ್ವತುಗಳಲ್ಲಿ ಸ್ಥಾಪಿಸಲಾಗಿರುವ ದೂರಸಂಪರ್ಕ ಗೋಪುರಗಳಿಗೆ ಒಂದು ಬಾರಿ ಪರಿಹಾರ ಯೋಜನೆ ಅಡಿಯಲ್ಲಿ ಕೆಳಕಂಡಂತೆ ಆಸ್ತಿತೆರಿಗೆ, ಉಪಕರ ಮತ್ತು ದಂಡವನ್ನು ವಿಧಿಸಿ ಸಂಗ್ರಹಿಸಲು ಸೂಚಿಸಲಾಗಿದೆ ಹಾಗೂ ಒಂದು ಬಾರಿ ಪರಿಹಾರ ಯೋಜನೆಯು ಮುಕ್ತಾಯಗೊಂಡ ನಂತರ ಕಾಯ್ದೆ ಮತ್ತು ನಿಯಮಗಳನ್ವಯ ಬಡ್ಡಿ ಹಾಗೂ ದಂಡ (ಪ್ರತಿ ಗೋಪುರಕ್ಕೆ ನಿಗದಿಪಡಿಸಿರುವ ವಾರ್ಷಿಕ ದರದ ಶೇ 100% ರಷ್ಟು) ಸಮೇತ ಬಾಕಿ ಆಸ್ತಿತೆರಿಗೆಯನ್ನು ವಸೂಲಾತಿ ಮಾಡಲು ಸೂಚಿಸಿದೆ.

**ಒಂದು ಬಾರಿ ಪರಿಹಾರ ಯೋಜನೆ ಅಡಿಯಲ್ಲಿ ಪ್ರತಿ ದೂರ ಸಂಪರ್ಕ ಗೋಪುರಕ್ಕೆ ವಾರ್ಷಿಕ ನಿಗಧಿಪಡಿಸಿರುವ ದರ**

| ಕ್ರ.ಸಂ | ಆರ್ಥಿಕ ಸಾಲುಗಳು | ಸಂಪರ್ಕ ಗೋಪುರ ಒಂದಕ್ಕೆ ನಿಗಧಿಪಡಿಸಿರುವ ದರ | ಉಪಕರ | ದಂಡ | ಒಟ್ಟು ಮೊತ್ತ |
|---|---|---|---|---|---|
| 1 | 2014-15 | 6000 | 1440 | 100 | 7540 |
| 2 | 2015-16 | 12000 | 2880 | 100 | 14980 |
| 3 | 2016-17 | 15000 | 3600 | 100 | 18700 |
| 4 | 2017-18 | 15000 | 3600 | 100 | 18700 |
| 5 | 2018-19 | 15000 | 3600 | 100 | 18700 |
| 6 | 2019-20 | 15000 | 3600 | 100 | 18700 |
| 7 | 2020-21 | 15000 | 3600 | 100 | 18700 |
| 8 | 2021-22 | 15000 | 3900 | 100 | 19000 |
| 9 | 2022-23 | 15000 | 3900 | 100 | 19000 |
| 10 | 2023-24 | 15000 | 3900 | 100 | 19000 |
| 11 | 2024-25 | 15000 | 3900 | 100 | 19000 |

**ವಿಶೇಷ ಸೂಚನೆ :**

1. ಪ್ರಸ್ತುತ ಸಾಲಿಗೆ ಆಸ್ತಿತೆರಿಗೆ ಪಾವತಿಸದೇ ಇದ್ದಲ್ಲಿ ನಮೂನೆ-5 ರ ಮೂಲಕ ದೂರ ಸಂಪರ್ಕ ಗೋಪುರಗಳನ್ನು ಘೋಷಿಸಿಕೊಂಡು ಆಸ್ತಿತೆರಿಗೆ ಪಾವತಿಸಬಹುದಾಗಿರುತ್ತದೆ.
2. ಈಗಾಗಲೇ ಆಸ್ತಿತೆರಿಗೆ ಪಾವತಿಸಿದ್ದಲ್ಲಿ ಪರಿಷ್ಕೃತ ಘೋಷಣೆಯನ್ನು ಸಲ್ಲಿಸಿ ದೂರ ಸಂಪರ್ಕ ಗೋಪುರಗಳನ್ನು ಘೋಷಿಸಿಕೊಂಡು ಆಸ್ತಿತೆರಿಗೆ ಪಾವತಿಸಬಹುದಾಗಿರುತ್ತದೆ.
3. ಮೇಲೆ ತಿಳಿಸಲಾದ ದರವು ಒಂದು ದೂರ ಸಂಪರ್ಕ ಗೋಪುರಕ್ಕೆ ಮಾತ್ರ ನಿಗಧಿಪಡಿಸಲಾಗಿದ್ದು, ಒಂದೇ ಸ್ವತ್ತು / ಕಟ್ಟಡದಲ್ಲಿ ಒಂದಕ್ಕಿಂತ ಹೆಚ್ಚು ದೂರಸಂಪರ್ಕ ಗೋಪುರಗಳನ್ನು ಅಳವಡಿಸಿದ್ದಲ್ಲಿ ಅದಕ್ಕೆ ಅನುಗುಣವಾಗಿ ಎಲ್ಲಾ ಪ್ರತಿಯೊಂದು ದೂರಸಂಪರ್ಕ ಗೋಪುರಕ್ಕೂ ಆಸ್ತಿತೆರಿಗೆಯನ್ನು ನಿಗಧಿಪಡಿಸಿ ವಸೂಲಾತಿ ಮಾಡತಕ್ಕದ್ದು.

1. ದೂರಸಂಪರ್ಕ ಗೋಪುರಗಳನ್ನು ಹೊಂದಿರುವ ಸ್ವತ್ತುಗಳ ತೆರಿಗೆದಾರರು ಈಗಾಗಲೇ ಆಸ್ತಿತೆರಿಗೆ ಪಾವತಿಸಿದ್ದಲ್ಲಿ, 2016-2017 ನೇ ಸಾಲಿನಿಂದ ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ತೆರಿಗೆದಾರರು ಆಸ್ತಿತೆರಿಗೆ ತಂತ್ರಾಂಶದ ಮೂಲಕ ಪಾವತಿಸಬಹುದಾಗಿದೆ.

2. 2014-15 ಮತ್ತು 2015-2016 ನೇ ಸಾಲುಗಳಿಗೆ ಭೌತಿಕ ಘೋಷಣೆಗಳೊಂದಿಗೆ (Manual declarations) ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ ಕಛೇರಿಗೆ ಪಾವತಿಸಬಹುದಾಗಿದೆ.

3. ಒಂದು ವೇಳೆ, ದೂರಸಂಪರ್ಕ ಗೋಪುರಗಳು ಸ್ಥಾಪಿಸಲಾಗಿರುವ ಸ್ವತುಗಳು 2014-15ನೇ ಸಾಲಿನಿಂದ ಆಸ್ತಿತೆರಿಗೆ ಬಾಕಿ ಉಳಿಸಿಕೊಂಡಿದ್ದಲ್ಲಿ, ಅಂತಹ ಸ್ವತ್ತುಗಳ ಮಾಲಿಕರಿಗೆ, ತಿಳುವಳಿಕೆ ಪತ್ರವನ್ನು ಜಾರಿಗೊಳಿಸುವ ಮೂಲಕ ದೂರಸಂಪರ್ಕ ಗೋಪುರಗಳನ್ನು ಘೋಷಿಸಿಕೊಂಡು ಆಸ್ತಿತೆರಿಗೆ ಪಾವತಿಸವಂತೆ ತಿಳಿಸಲು ಕ್ರಮವಹಿಸುವುದು.

ಮುಂದುವರೆದಂತೆ, ಪ್ರಸ್ತುತ ಒಂದು ಬಾರಿ ಪರಿಹಾರ ಯೋಜನೆಯು ದಿನಾಂಕ : 30-11-2024ರ ವರೆಗೆ ಚಾಲ್ತಿಯಲ್ಲಿದ್ದು, ಸದರಿ ಯೋಜನೆ ಅಡಿಯಲ್ಲಿ ವಿಳಂಬ ಪಾವತಿಗೆ ವಿಧಿಸುವ ಬಡ್ಡಿಯನ್ನು ಮತ್ತು ವ್ಯತ್ಯಾಸದ ಆಸ್ತಿತೆರಿಗೆಯ ಸಮಾನವಾದ ದಂಡವನ್ನು ಮನ್ನಾ ಮಾಡಿರುವ ಬೃಹತ್ ಪ್ರಯೋಜನವನ್ನು ಪಡೆಯಬಹುದಾಗಿರುತ್ತದೆ.

ಮೇಲಿನ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿ/ ಸಿಬ್ಬಂದಿಗಳಿಗೆ ಸೂಚಿಸುತ್ತಾ, ಪ್ರಚಾರ ಕ್ರಮದ (Campaign mode) ಮೂಲಕ ಎಲ್ಲಾ ದೂರಸಂಪರ್ಕ ಅಪರೇಟರ್ಸ್‌ಗಳಿಗೆ/ ದೂರಸಂಪರ್ಕ ಗೋಪುರಗಳನ್ನು ಹೊಂದಿರುವ ತೆರಿಗೆದಾರರಿಗೆ ಆಸ್ತಿ ತೆರಿಗೆಯನ್ನು ಪಾವತಿಸುವಂತೆ ತಿಳಿಸಲು ಕ್ರಮಕೈಗೊಳ್ಳುವುದು.

**ಮುಖ್ಯ ಆಯುಕ್ತರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

<u>ಪ್ರತಿಯನ್ನು:</u>

1. ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಕಂದಾಯ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಎಲ್ಲಾ ವಲಯ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಜಂಟಿ / ಉಪ ಆಯುಕ್ತರು (ಕಂದಾಯ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಎಲ್ಲಾ ವಲಯ ಜಂಟಿ / ಉಪ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಮುಖ್ಯ ಅಭಿಯಂತರರು, (ಒ.ಎಫ್.ಸಿ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
7. ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳು / ನೌಕರರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| ಸಂಖ್ಯೆ : ಜಂ.ಆ(ಕಂ)ಪಿ.ಆರ್/274/2024-25<br>ದಿನಾಂಕ: 19-10-2024 | **ರವರಿಗೆ,**<br>**ಮುಖ್ಯ ಅಭಿಯಂತರರು (ಒ.ಎಫ್.ಸಿ)** |
|---|---|
| **ಇಂದ,**<br>ಜಂಟಿ ಆಯುಕ್ತರು (ಕಂದಾಯ) | ಪ್ರತಿಯನ್ನು :<br>ಮಾನ್ಯ ವಿಶೇಷ ಆಯುಕ್ತರು (ಕಂದಾಯ) ರವರ ಅವಗಾಹನೆಗಾಗಿ ಸಲ್ಲಿಸಿದೆ. |

## ಆಂತರಿಕ ಕಛೇರಿ ಟಿಪ್ಪಣಿ

ವಿಷಯ : ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಭೂಮಿ ಮತ್ತು ಕಟ್ಟಡಗಳ ಮೇಲೆ ಅಳವಡಿಸಲಾಗಿರುವ ದೂರ ಸಂಪರ್ಕ ಗೋಪುರಗಳಿಗೆ ಆಸ್ತಿತೆರಿಗೆಯನ್ನು ವಿಧಿಸಿ, ಸಂಗ್ರಹಿಸುವ ಬಗ್ಗೆ.

ಉಲ್ಲೇಖ :
1. ದಾವೆ ಸಂಖ್ಯೆ : ಡಬ್ಲ್ಯೂಪಿ/8114/2009 ಮತ್ತು ಇತರೆ ಆದೇಶ ದಿನಾಂಕ : 13-01-2009.
2. ಮಾನ್ಯ ಮುಖ್ಯ ಆಯುಕ್ತರವರ ಸುತ್ತೋಲೆ ಸಂಖ್ಯೆ : ಜಂಆ(ಕಂ) ಪಿಆರ್/274/2024-25, ದಿನಾಂಕ : 14-10-2024.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಕೆಎಂಸಿ ಕಾಯ್ದೆ1976 ರ ಪ್ರಕರಣ 108ಎ ಹಾಗೂ ಅದರಡಿಯಲ್ಲಿ ರಚಿಸಲಾಗಿರುವ ಆಸ್ತಿತೆರಿಗೆ ನಿಯಮಾಗಳಿಗಳು 2009 ರ ಅನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಭೂಮಿ ಮತ್ತು ಕಟ್ಟಡಗಳ ಮೇಲೆ ಅಳವಡಿಸಲಾಗಿರುವ ದೂರ ಸಂಪರ್ಕ ಗೋಪುರಗಳಿಗೆ ಆಸ್ತಿತೆರಿಗೆಯನ್ನು ವಿಧಿಸಿ ಸಂಗ್ರಹಿಸಲಾಗುತ್ತಿತ್ತು. ಈ ಸಂಬಂದ ಟೆಲಿಕಾಂ ಆಪರೇಟರ್‌ಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿ ಕೆಎಂಸಿ ಕಾಯ್ದೆಯಲ್ಲಿ ಕಟ್ಟಡದ ವ್ಯಾಖ್ಯಾನದ ಅಡಿಯಲ್ಲಿ ದೂರಸಂಪರ್ಕ ಗೋಪುರಗಳ ಬಗ್ಗೆ ವ್ಯಾಖ್ಯಾನಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ದಾವೆಯನ್ನು ನ್ಯಾಯಾಲಯವು ವಿಚಾರಣೆ ನಡೆಸಿ, ಕರ್ನಾಟಕ ಸರ್ಕಾರವು ಕೆ.ಎಂ.ಸಿ ಕಾಯ್ದೆ 1976 ಪ್ರಕರಣ 2 ಖಂಡ 1ಎ ಉಪ-ಖಂಡ (ಎ) ರಲ್ಲಿ ಕಟ್ಟಡದ ವ್ಯಾಖ್ಯಾನಕ್ಕೆ ತಿದ್ದುಪಡಿ ತಂದು ದಿನಾಂಕ: 09-01-2015 ರಂದು ಅಧಿಸೂಚನೆಯನ್ನು ಹೊರಡಿಸಿರುವಂತೆ, ದಿನಾಂಕ: 09-01-2015 ರಿಂದ ದೂರಸಂಪರ್ಕ ಗೋಪುರಗಳ ಮೇಲೆ ಆಸ್ತಿ ತೆರಿಗೆಯನ್ನು ವಿಧಿಸಿ ಮತ್ತು ಸಂಗ್ರಹಿಸಬಹುದೆಂದು ತೀರ್ಪು ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತದೆ.

ನ್ಯಾಯಾಲಯದ ಆದೇಶದಂತೆ, ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಭೂಮಿ ಮತ್ತು ಕಟ್ಟಡಗಳ ಮೇಲೆ ಅಳವಡಿಸಲಾಗಿರುವ ದೂರ ಸಂಪರ್ಕ ಗೋಪುರಗಳಿಗೆ ಆಸ್ತಿತೆರಿಗೆಯನ್ನು ವಿಧಿಸಿ, ಸಂಗ್ರಹಿಸುವ ಬಗ್ಗೆ ಉಲ್ಲೇಖ-(2) ರಂತೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಆದುದರಿಂದ ಎಲ್ಲಾ ಟೆಲಿಕಾಂ ಆಪರೇಟರ್‌ಗಳಿಗೆ ಸುತ್ತೋಲೆ ಬಗ್ಗೆ ಮಾಹಿತಿ ನೀಡಿ, ಪ್ರಸ್ತುತ ಒಂದು ಬಾರಿ ಪರಿಹಾರ ಯೋಜನೆಯು ದಿನಾಂಕ:30-11-2024 ರವರೆಗೆ ಜಾರಿಯಲ್ಲಿರುವುದರಿಂದ ಸದರಿ ಯೋಜನೆಯ ಉಪಯೋಗವನ್ನು ನಿಗಧಿತ ಅವಧಿಯೊಳಗಾಗಿ ಸದುಪಯೋಗಪಡಿಸಿಕೊಂಡು ಬೇ-ಬಾಕಿ ಆಸ್ತಿತೆರಿಗೆಯನ್ನು ಪಾವತಿಸುವಂತೆ ಪತ್ರ ವ್ಯವಹರಣೆ ಮಾಡುವಂತೆ ತಿಳಿಸಲು ಮಾನ್ಯ ವಿಶೇಷ ಆಯುಕ್ತರು (ಕಂದಾಯ) ರವರಿಂದ ನಿರ್ದೇಶಿಲ್ಪಟ್ಟಿದ್ದೇನೆ.

**ಜಂಟಿ ಆಯುಕ್ತರು (ಕಂದಾಯ)-(ಅ.ಪ್ರ)** 19/10/2024
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**